ಹುಡುಕೋಣ. ಬಹುಶಃ ಇಲ್ಲಿ ಕತ್ತಲಿರುವುದರಿಂದ ನಾವಿಲ್ಲಿ ಇಳಿಯುವುದನ್ನು ನೋಡುವವರು ಇಲ್ಲ.'

ಸುರೇಂದ್ರರ ಮಾತಿನಲ್ಲಿ ತೂಕವಿತ್ತು. ವಿಕ್ಟೋರಿಯಾ ನಿಂತ ಜಾಗದಲ್ಲಿ ನಗರಪಾಲಿಕೆಯ ಲ್ಯಾಂಪ್‌ಪೋಸ್ಟಿನ ಬಲ್ಬೊಂದು ಹಾಳಾಗಿತ್ತು ಅಥವಾ ಇನ್ನೇನಾಗಿತ್ತೋ ತಿಳಿಯದು. ಆದರೆ ಅಲ್ಲಿ ಸಾಕಷ್ಟು ಅಂಧಕಾರವಿತ್ತು. ಎದುರಿನ ದಿಕ್ಕಿನಲ್ಲಿದ್ದ ಫೌರಸ್ ರೋಡಿನ ರೆಡ್‌ಲೈಟ್ ಏರಿಯಾದ ದೀಪಗಳು ಅಲ್ಲಿಯ ಕೆಲವು ಮನೆಗಳಲ್ಲಿ ಹೊತ್ತಿ ಆರುತ್ತಿದ್ದವು. ಪಿಲಾ ಹೌಸ್‌ನ ಸಮೀಪದಲ್ಲಿ ರಸ್ತೆಯಲ್ಲಿ ಸಾಕಷ್ಟು ಜನರ ಗುಂಪಿತ್ತು. ಆ ಗುಂಪಿನ ಜನರ ದೃಷ್ಟಿ ತಮ್ಮ ಮೇಲೆ ಬೀಳದಿರಲೆಂದು ಇಬ್ಬರೂ ಸ್ವಲ್ಪ ದೂರಕ್ಕೆ ಹೋಗಿ, ನಂತರ ಎದುರಿನ ಫುಟ್‌ಪಾತ್‌ನಲ್ಲಿ ಹೋದರು. ಅಲ್ಲಿಯೇ ಹಾದು ಹೋಗುತ್ತಿದ್ದ ಟ್ರಾಮ್‌ನಲ್ಲಿ ಕಡಿಮೆ ಸಂಖ್ಯೆಯಲ್ಲಿ ಪ್ರಯಾಣಿಕರಿದ್ದರು. ಆದರೆ ಅವರಲ್ಲಿದ್ದ ಯಾರಿಗಾದರೂ ತಮ್ಮ ಗುರುತು ಸಿಕ್ಕರೆ

'ಸುರೇಂದ್ರಜಿ!' ಕೇಶವಲಾಲರು ಮೆಲ್ಲನೆ ಹೇಳಿದರು, 'ನಾವು ಈ ಜಾಗಕ್ಕೆ ಖಂಡಿತ ಅಪರಿಚಿತರು. ಆದರೆ ನಮ್ಮ ಈ ಉಡುಗೆ ಯಾರೊಬ್ಬರ ಗಮನವನ್ನಾದರೂ ಸೆಳೆಯಬಹುದು. ನಮ್ಮ ಮುಖವನ್ನು ನೋಡಿದ ಅನೇಕರು ಇದ್ದಾರೆ. ಒಂದು ವೇಳೆ ನಮ್ಮ ಮೇಲೆ ಅವರ ದೃಷ್ಟಿ ಬಿದ್ದರೆ, ಗಾಂಧೀಜಿಯವರ ಹೆಸರಿಗೆ ಕಳಂಕ ಹತ್ತಲು ತಡವಾಗಲಾರದು, ನಮ್ಮ ಮಾತನ್ನು ಯಾರೂ ಸಹ ನಂಬುವುದೂ ಇಲ್ಲ.'

'ಇದು ನಿಜ. ಆದರೆ ಈ ಕಾಲ್ಪನಿಕ ಭಯದಿಂದ ಹರಿಲಾಲನನ್ನು ನೋಡುವುದರಿಂದ ತಪ್ಪಿಸಿಕೊಳ್ಳಲಂತೂ ಸಾಧ್ಯವಿಲ್ಲವಲ್ಲ? ಹರಿಲಾಲರು ನಿಮಗೆ ಚಿಕ್ಕಪ್ಪ, ನನಗೆ ಮಾವ... ನಮ್ಮಿಬ್ಬರಿಗೂ ಅವರು ತಂದೆಗೆ ಸಮಾನ.'

'ನಾವು ಹೆದರಿ ಮರಳಿ ಹೋಗಬೇಕೆಂದು ನಾನು ಹೇಳುತ್ತಿಲ್ಲ' ಕೇಶವಲಾಲರು ಸ್ಪಷ್ಟನೆಯನ್ನು ನೀಡಿದರು, 'ಒಂದು ವೇಳೆ ನಾವು ಹೀಗೇನಾದರೂ ಮಾಡಿದರೆ, ಗಾಂಧೀಜಿಯವರು ನಮಗೆ ಕೊಟ್ಟ ಶಿಕ್ಷಣವನ್ನು ನೀರಿನಲ್ಲಿ ಹೋಮ ಮಾಡಿದಂತಾಗುವುದು...ನಾನು ಹೇಳುವುದಿಷ್ಟೆ, ನಾವು ನಮ್ಮ ಕಣ್ಣುಗಳನ್ನು ಕೆಳಗೆ ತಗ್ಗಿಸಿಕೊಂಡು, ಸಾಧ್ಯವಾದಷ್ಟು ಮುಖವನ್ನು ಮರೆಮಾಚಿಕೊಂಡು, ಯಾರ ದೃಷ್ಟಿಗೂ ಬೀಳದಂತೆ ಹೋಗೋಣ.'

ಈಗ ಫೌರಸ್ ರೋಡ್ ಆರಂಭಗೊಂಡಿತ್ತು. ತೆರೆದ ಬಾಗಿಲುಗಳಲ್ಲಿ ಕುಣಿದುನರ್ತಿಸುತ್ತಾ ಇಣುಕುವ ಮಹಿಳೆಯರು ಹಾಗೂ ತೆರೆದ ಕಿಡಕಿಗಳಿಂದ ಹೊರಗೆ ಚೆಲ್ಲುವ ಯೌವನದ ಮಾರ್ಕೆಟ್ ಕಾವು ಪಡೆದಿತ್ತು. ಅಲ್ಲಲ್ಲಿ ಗಿರಾಕಿಗಳನ್ನು ಸವಿಮಾತುಗಳಿಂದ ಮನವೊಲಿಸಲಾಗುತ್ತಿದ್ದರೆ, ಇನ್ನೊಂದೆಡೆ ವ್ಯಾಪಾರ ಕುದುರಿಸಿಕೊಳ್ಳುವ ಪೈಪೋಟಿ ನಡೆಯುತ್ತಿತ್ತು. ಕೆಲವು ದಿಕ್ಕುಗಳಿಂದ ತಬಲಾ ಅಥವಾ ಹಾರ್ಮೋನಿಯಮ್ ಸ್ವರದೊಂದಿಗೆ ಸಂಗೀತದ ಆಲಾಪ ಕೇಳಿ ಬರುತ್ತಿತ್ತು.

'ನಾವು ಇಲ್ಲಿಯೇ ಯಾರನ್ನಾದರು ಚೌಕದ ಬಿಲ್ಡಿಂಗ್ ಬಗ್ಗೆ ಕೇಳೋಣ...' ಕೇಶವಲಾಲರು ಸುರೇಂದ್ರರನ್ನು ತಡೆದರು. ಪಾನ್ ಅಂಗಡಿಯೊಂದರಲ್ಲಿ ನಾಲ್ಕೈದು ಗಿರಾಕಿಗಳು ಗುಂಪು ಕೂಡಿ ನಿಂತಿದ್ದರು. ಇಬ್ಬರು ಅವರ ಸಮೀಪಕ್ಕೆ ಹೋಗಿ ನಿಂತರು.

'ಬನ್ನಿಬನ್ನಿ ಬಾಬುಜಿ! ಹೇಳಿ...ನಿಮಗೆ ಎಂಥ ಪಾನ್ ಮಾಡಿಕೊಡಲಿ? ನವರತನ್ ಜರ್ದಾ...ಮಂಚ ಮುರಿದು ಹೋಗುವಂಥ ಪಾನ್...ಆ ಬೇವರ್ಸಿ ಸೂಳೆ ನಿಮ್ಮನ್ನು ಸದಾ ನೆನಪಿಸಿಕೊಳ್ಳುತ್ತಾಳೆ...' ಪಾನ್‌ವಾಲಾ ಕೇಶವಲಾಲರನ್ನು ನೋಡುತ್ತಾ ಕುಟಿಲ ನಗೆ ಚೆಲ್ಲಿದ. ಅವನ ನಗುವಿನೊಂದಿಗೆ ಅವನ ಹಳದಿ ಮತ್ತು ಕೊಳಕು ಹಲ್ಲುಗಳು ಸಹ ಕಾಣುತ್ತಿದ್ದವು. ಕೇಶವಲಾಲರು ಅವನ ಕೈಯನ್ನು ನೋಡಿದರು. ಅವನ ಕೈ ಸಹ ತುಂಬಾ ಕೊಳಕಾಗಿತ್ತು. ಕೇಶವದಾಸರು ಕಂಪಿಸಿದರು.

'ಭಾಯಿ!' ಸುರೇಂದ್ರರು ಮೆಲ್ಲನೆ ಹೇಳಿದರು, 'ನಾವು ಚೌಕದ ಬಿಲ್ಡಿಂಗ್‌ಗೆ ಹೋಗಬೇಕು. ಅದು ಎಲ್ಲಿದೆ ಎಂದು ಹೇಳಿದರೆ ತುಂಬಾ ಉಪಕಾರವಾಗುತ್ತದೆ.'

ಪಾನ್‌ವಾಲ ಹೋಹೋಹೋ ಎಂದು ಗಟ್ಟಿಯಾಗಿ ನಕ್ಕ. ಪಾನ್ ಜಗಿಯುತ್ತಿದ್ದ ದಷ್ಟಪುಷ್ಟನಾಗಿದ್ದ ಸರದಾರಜಿಯೊಬ್ಬ ಪಿಚ್ ಎಂದು ಉಗಿದು ನಕ್ಕ. ನಂತರ ಅವನು ಸುರೇಂದ್ರರ ಹೆಗಲ ಮೇಲೆ ಕೈಯಿಟ್ಟು ಹೇಳಿದ, 'ನೀವು ಇಲ್ಲಿಗೆ ಮೊದಲ ಬಾರಿಗೆ ಬರುತ್ತಿದ್ದೀರೆಂದು ತೋರುತ್ತೆ!'

'ಹೌದು...ನಾವಿಲ್ಲಿಗೆ ಅಪರಿಚಿತರು. ನೀವು ವಿಳಾಸ ಹೇಳಿದರೆ ತುಂಬಾ ಸಹಾಯ ಮಾಡಿದಂತಾಗುತ್ತದೆ...' ಕೇಶವಲಾಲರಿಗೆ ಮುಳುಗುವವನಿಗೆ ಹುಲ್ಲಿನ ಆಸರೆ ಸಿಕ್ಕಿದ ಅನುಭವವಾಯಿತು.

'ಬಾಬೂಜಿ, ನಿಮ್ಮಂಥ ಸಜ್ಜನರಿಗೆ ಸಹಾಯ ಮಾಡುವುದೇ ನಮ್ಮ ದಂಧೆ!' ಆ ಸಿಖ್ ಯುವಕ ಮತ್ತೆ ನಕ್ಕ, 'ನಮ್ಮ ಹತ್ತಿರ ತುಂಬಾ ಸುಂದರಿಯರಾದ ಬಾಯಿಗಳಿದ್ದಾರೆ, ನೀವು ಆ ಚೌಕದ ಬಿಲ್ಡಿಂಗನ್ನೇ ಮರೆತು ಬಿಡುತ್ತೀರ...'

ಕೇಶವಲಾಲ್ ಮತ್ತು ಸುರೇಂದ್ರರು ಗರಬಡಿದಂತೆ ನಿಂತರು. ಈ ಸಿಖ್ ಯುವಕ ವೇಶ್ಯೆಯರ ದಲ್ಲಾಳಿಯಾಗಿದ್ದಾನೆ. ತಮ್ಮನ್ನು ಹೊಸ ಗಿರಾಕಿಗಳೆಂದು ತಿಳಿದಿದ್ದಾನೆ. ಇದನ್ನು ಮನಗಂಡು ಇಬ್ಬರು ಹೆದರಿದರು. ಇನ್ನು ಇಲ್ಲಿ ಮತ್ತೂ ವಿಚಾರಿಸುವುದರಲ್ಲಿ ಅರ್ಥವಿಲ್ಲ. ಇದರ ಅರಿವಾಗುತ್ತಲೇ ಕೇಶವಲಾಲರು ಸುರೇಂದ್ರರ ಕೈಯನ್ನು ಹಿಡಿದು ಮುಂದಕ್ಕೆ ಹೋದರು. ಕೇಶವಲಾಲರ ಕೈ ಬೆವತಿತ್ತು.

'ಅರೇ, ಎಲ್ಲಿಗೆ ಹೋಗುತ್ತಿದ್ದೀರಿ ಬಾಬೂಜಿ?' ಹಿಂದಿನಿಂದ ಪಾನ್‌ವಾಲಾನ ಧ್ವನಿ ಕೇಳಿಸಿತು.

'ನಮ್ಮ ಪಾನ್ ತಿನ್ನದೆ ನಿಮ್ಮ ಖಾದಿ ಬಟ್ಟೆಗೆ ತಾಕತ್ ಎಲ್ಲಿಂದ ಬರುವುದು?' ಹೀಗೆಂದು ಅವನು ಮತ್ತೆ ಅಶ್ಲೀಲವಾಗಿ ನಕ್ಕಿದ್ದನ್ನು ಇಬ್ಬರೂ ಕೇಳಿದರು. ಇಬ್ಬರೂ ಅವನ ಮಾತನ್ನು ಕೇಳದವರಂತೆ ಗಲ್ಲಿಯೊಂದನ್ನು ಹೊಕ್ಕರು. ಅಲ್ಲಿ ಅಂಧಕಾರವಿದ್ದು, ಅಷ್ಟು ಗದ್ದಲವಿರಲಿಲ್ಲ. ಇಬ್ಬರೂ ಹಣೆಯಿಂದ ಬೆವರನ್ನು ಒರೆಸಿಕೊಂಡರು. ತಮ್ಮ ಒಣಗಿದ ನಾಲಿಗೆಯನ್ನು ತುಟಿಗಳ ಮೇಲೆ ಸವರಿಕೊಂಡರು.

'ಕೇಶವ್ ಭಾಯಿ!' ಸುರೇಂದ್ರರು ಧೈರ್ಯವಹಿಸಿ ಹೇಳಿದರು, 'ಕೆಲಸ ಕಷ್ಟವಿದೆ, ಆದರೆ ಮಾಡದಿದ್ದರೆ ವಿಧಿಯಿಲ್ಲ. ಇನ್ನೂ ತಡವಾಗುವುದಕ್ಕೆ ಮೊದಲು ನಾವು ವಿಳಾಸವನ್ನು ಹುಡುಕಬೇಕು.'

'ಸುರೇಂದ್ರಜಿ' ಕೇಶವಲಾಲರು ವ್ಯಾವಹಾರಿಕ ಬುದ್ಧಿಯನ್ನು ಪ್ರದರ್ಶಿಸಿದರು, 'ನಾವು ಗಾಂಧಿ ಟೋಪಿಯನ್ನು ಕಳಚಿ ತಕ್ಷಣ ಜೇಬಿನಲ್ಲಿಟ್ಟುಕೊಳ್ಳೋಣ... ಈ ಟೋಪಿಯಿಂದಾಗಿ ಎಲ್ಲರೂ ನಮ್ಮನ್ನು ದುರದುರನೆ ನೋಡುತ್ತಾರೆ; ಅವರು ನಗುವುದನ್ನು ನೋಡಿ ನನ್ನಿಂದ ಸಹಿಸಿಕೊಳ್ಳಲು ಆಗುತ್ತಿಲ್ಲ...ಈ ಟೋಪಿಯನ್ನು ಹೀಗೆ ಗೇಲಿ ಮಾಡುವುದಕ್ಕೆ ಧರಿಸಿಲ್ಲ.' ಕೇಶವಲಾಲರು ಸರಿಯಾಗಿಯೇ ಯೋಚಿಸಿದ್ದರು. ಅವರ ಶ್ವೇತ ಗಾಂಧಿ ಟೋಪಿಯಿಂದಾಗಿ ಕೋಣೆಗಳ ಕಿಡಕಿಬಾಗಿಲುಗಳ ಬಳಿ ಕೂತ ಅನೇಕ ಮಹಿಳೆಯರು ಅಶ್ಲೀಲವಾಗಿ ಸಂಜ್ಞೆ ಮಾಡಿ ನಗುತ್ತಿದ್ದರು.

ಇಬ್ಬರೂ ಟೋಪಿಯನ್ನು ಕಳಚಿ ತಮ್ಮತಮ್ಮ ಜೇಬಿನೊಳಗಿಟ್ಟುಕೊಂಡರು. ಸ್ವಲ್ಪ ಹೊತ್ತು ಅತ್ತ ಇತ್ತ ಅಲೆದಾಡಿದ ನಂತರ ಚೌಕದ ಬಿಲ್ಡಿಂಗ್‌ನ ವಿಳಾಸ ಪತ್ತೆಯಾಯಿತು. ಅದು ಮೂರು ಅಂತಸ್ತಿನ ಕಟ್ಟಡವಾಗಿದ್ದು, ಜರ್ಜರಗೊಂಡ ಸ್ಥಿತಿಯಲ್ಲಿತ್ತು. ಈ ಕಟ್ಟಡ ಪೂರ್ವಪಶ್ಚಿಮ ಎರಡು ಭಾಗಗಳಲ್ಲಿ ಹಂಚಿ ಹೋಗಿತ್ತು. ಪ್ರತಿ ಅಂತಸ್ತಿನಲ್ಲೂ ಇಪ್ಪತ್ತೈದು ಚಿಕ್ಕಚಿಕ್ಕ ಕೊಠಡಿಗಳಿದ್ದವು. ಪ್ರತಿಯೊಂದು ಕೊಠಡಿಯಲ್ಲಿ ಪರದೆ ತೂಗಾಡುತ್ತಿತ್ತು. ಅನೇಕ ಪರದೆಗಳ ಹಿಂದಿನಿಂದ ಇಬ್ಬರುಮೂವರು ಮಹಿಳೆಯರು ಕತ್ತನ್ನು ಹೊರಗೆ ತಂದು, ಕಣ್‌ಸನ್ನೆಯಿಂದ ದಾರಿಹೋಕರಲ್ಲಿ ಬಯಕೆಯನ್ನು ಹುಟ್ಟಿಸುತ್ತಿದ್ದರು. ಇನ್ನು ಹೊರಗಿನ ಮಹಡಿ ಮೇಲಿನ ಕೊಠಡಿಗಳಿಂದ ಕೆಲವು ಮಹಿಳೆಯರು ಕೆಳಗೆ ಬಾಗಿ, ಗಿರಾಕಿಗಳನ್ನು ಮೇಲೆಳೆದುಕೊಳ್ಳುವಂತೆ ತೋರುತ್ತಿತ್ತು. ಕೇಶವಲಾಲರು ಮತ್ತು ಸುರೇಂದ್ರರು ಈ ಕಟ್ಟಡದ ಕೆಳಗಿನ ಭಾಗಕ್ಕೆ ಬಂದು ನಿಂತರು.

'ಬನ್ನಿ...ಬನ್ನಿ...ಸೇಠ್‌ಜಿ. ಈ ಬಡವರ ಮನೆಯಲ್ಲಿ ಮನಸ್ಸು ಖುಷಿಗೊಳ್ಳುವಂಥ ಒಳ್ಳೊಳ್ಳೆ ಮಾಲುಗಳು ಸಿಗುತ್ತವೆ...' ಬಾಗಿಲ ಬಳಿ ನಿಂತಿದ್ದ ನಡುವಯಸ್ಸಿನ ಮಹಿಳೆಯೊಬ್ಬಳು ಕೈಚಾಚಿ ಅಶುದ್ಧ ಭಾಷೆಯಲ್ಲಿ ಅವರನ್ನು ಕರೆದಳು. ಕೇಶವಲಾಲರು ಕಂಪಿಸಿದರು. ಅವರು ಸುರೇಂದ್ರರನ್ನು ನೋಡಿದರು. ಅವರ ಸ್ಥಿತಿ ಇನ್ನೂ ಶೋಚನೀಯವಾಗಿತ್ತು.

'ಹೆದರಬೇಡಿ...ಇಲ್ಲಿ ಆಂಗ್ಲೋ ಇಂಡಿಯನ್ ಮಾಲ್ ಸಹ ಸಿಗುವುದು...ಬನ್ನಿ...ಮಾಲನ್ನು ನೋಡಿ...' ಆ ಮಹಿಳೆ ಒತ್ತಾಯಿಸುತ್ತಿದ್ದಳು.

'ಅಕ್ಕಾ,' ಕೇಶವಲಾಲರು ಧೈರ್ಯಗೂಡಿಸಿ ಮೆಲ್ಲನೆ ಹೇಳಿದರು, 'ನಾವು ರೇಶಮ್ ಬಾಯಿಯವರ ಬಂಗ್ಲೆಗೆ ಹೋಗ ಬೇಕು.'

'ಅಕ್ಕಾ!' ಒಮ್ಮೆಲೆ ಏಳೆಂಟು ಮಹಿಳೆಯರು ಕೋರಸ್‌ನಲ್ಲಿ ಕೇಶವಲಾಲರ ಸಂಬೋಧನೆಯನ್ನು ನಕಲು ಮಾಡಿ, ಚಪ್ಪಾಳೆ ತಟ್ಟಿ ನಕ್ಕರು, ಅದು ಸುತ್ತಮುತ್ತ ಪ್ರತಿಧ್ವನಿಸಿತು. ಕೇಶವಲಾಲರು ನಾಚಿದರು.

'ವ್ಹಾಹ್...ವ್ಹಾಹ್...ತುಂಬಾ ಚೆನ್ನಾಗಿದೆ...'